ಸಾಕ್ಷಿಯನ್ನು ಇಂದು ದಿನಾಂಕಃ 17.09.2019 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.
**ಮುಂದುವರೆದ ಪಾಟಿ ಸವಾಲು ಪ್ರತಿ ವಾದಿ 1, 2 ರ ಪರವಾಗಿ ಶ್ರೀ ಎಸ್ ಎಸ್ ಜಿ ವಕೀಲರಿಂದ.**

ದಾವಾ ಜಮಿನುಗಳು ಮೊದಲು ಇನಾಮ ಜಮೀನುಗಳು ಆಗಿದ್ದವು. ದಿಃ 28.03.1954 ರಂದು ಇನಾಮ ರದ್ದತಿಗಾಗಿ ಸರಕಾರಕ್ಕೆ ಹೋದವು. ಇನಾಮ ರದ್ದತಿ ಆದ ನಂತರ ಸಾಗುವಳಿ ದಾರರಿಗೆ ಸರಕಾರದವರು ಜಮೀನನ್ನು ನೀಡಿದ್ದರು. ಮಿರಜಾ ಬೇಗ ಮುಲ್ಲಾ, ನಿಜಾ ಬೇಗ ಮುಲ್ಲಾ ರವರು ಇಬ್ಬರು ಅಣ್ಣ ತಮ್ಮಂದಿರು ಎಂದರೆ ಸರಿಯಲ್ಲ. ಅವರು ಚಿಕ್ಕಪ್ಪ ಹಾಗೂ ಮಕ್ಕಳು ಇದ್ದರು ಎಂದರೆ ಸುಳ್ಳು. ಅವರಿಬ್ಬರು 1922 ರಲ್ಲಿ ಜಮೀನುಗಳನ್ನು ವಾಟ್ನಿ ಮಾಡಿಕೊಂಡರು ಎಂದರೆ ಸರಿಯಲ್ಲ. ಆ ಕಾಲದಲ್ಲಿ ನವಾಜಬೇಗ ಮುಲ್ಲಾ ರವರಿಗೆ ಸರ್ವೆ ನಂ.175, 178, 188, 177, 187 ಬಂದವು ಎಂದರೆ ಸರಿಯಲ್ಲ. ಎಲ್ಲ ಜಮೀನುಗಳಿಗೆ ನಾವೆ ಮಾಲೀಕರು ಎಂದು ಸಾಕ್ಷಿ ಪುನಃ ನುಡಿಯುತ್ತಾರೆ. ಅದೇ ರೀತಿಯಾಗಿ ಮಿರ್ಜಾ ಬೇಗ ರವರಿಗೆ ಹಳೆಯ ಸರ್ವೆ ನಂ.172, 173, 174, 176 ಬಂದವು ಎಂದರೆ ಸುಳ್ಳು. ಈ ರೀತಿಯಾಗಿ ದಿಃ 15.01.1934 ರಂದು ಮಿರ್ಜಾ ಬೇಗ ರವರು ತೀರಿಕೊಂಡ ನಂತರ ಅವರ ಖಾಸ ಮಗ ಡ ನಂ.215 ರಂತೆ ವಾರಸಾ ಆಯಿತು ಎಂದರೆ ಸಾಕ್ಷಿಯು ಸದರಿ ಡ ರದ್ದಾಗಿದೆ ಎನ್ನುತ್ತಾರೆ. ಈ ರೀತಿಯಾಗಿ ಮಿರ್ಜಾ ಬೇಗನಿಗೆ ಬಂದ ಹಳೆಯ ಸರ್ವೆ ನಂ. 172, 173, 174, 176 ವಾರಸಾ ನಾತೆಯಿಂದ ಅವರ ಮಗನಾದ ಲಾಡಬೇಗ ಮಿರ್ಜಾಬೇಗ ಮುಲ್ಲಾ ಇತನ ಹೆಸರಿಗೆ ದಾಖಲಾದವು ಎಂದರೆ ಸುಳ್ಳು. ನಂತರ ಡ ನಂ.307 ರ ಪ್ರಕಾರ ಲಾಡಬೇಗ ಮಿರ್ಜಾಬೇಗ ಮುಲ್ಲಾ ಇತನು ಮದುವೆಗಾಗಿ ಹಳೆಯ ಸರ್ವೆ ನಂ.173, 174 ನ್ನು ಒಬ್ಬ ಬಿಬಿಸಾ ಹಾದಿಮನಿ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ಸುಳ್ಳು. ಈ ರೀತಿಯಾಗಿ ಮಾರಾಟ ಆದ ನಿಮಿತ್ತ ಮಸೂತಿ ಗ್ರಾಮದ ಡ ನಂ.307 ಮಂಜೂರು ಆಯಿತು ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಪ್ರತಿವಾದಿ 1 , 2 ರ ಅಜ್ಜನಾದ ಲಾಡಬೇಗ ಮಿರ್ಜಾಬೇಗ ಮುಲ್ಲಾ ಇತನು ಸರ್ವೆ ನಂ.680 ನ್ನು ದಿನಾಂಕಃ 26.04.1968 ರಂದು ಚನ್ನಪ್ಪ ಪರಪ್ಪಗೌಡ ಪಾಟೀಲ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ಸುಳ್ಳು. ಅದರಂತೆ ಡ ನಂ.1629 ಮಂಜೂರಾಯಿತು ಎಂದರೆ ಸುಳ್ಳು. ಈ ಕ್ರಯದ ಬಗ್ಗೆ ಡ ನಂ.1827 ಮಂಜೂರಾಯಿತು ಎಂದರೆ ಸುಳ್ಳು. ಸರ್ವೆ ನಂ.293 ತನ್ನ ಪಶ್ಚಾತ ತನ್ನ ಮಗನಿಗೆ ಹೋಗಬೇಕೆಂದು ಬಿಬಿಸಾ ರವರು ಹಕ್ಕು ಬಿಟ್ಟು ಕೊಟ್ಟಿದ್ದರು ಎಂದರೆ ಸುಳ್ಳು. ಅದರಂತೆ ಮಸೂತಿ ಗ್ರಾಮದ ಡ ನಂ.2140 ಮಂಜೂರಾಯಿತು ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಮುಂದುವರೆದು ಅದು ವಜಾ ಆಗಿದೆ ಎನ್ನುತ್ತಾರೆ. ಅದೇ ರೀತಿಯಾಗಿ ಸರ್ವೆ ನಂ.679 ಇದು

ಲಾಡಬೇಗ ರವರು ಮೃತ ಹೊಂದಿದ ನಂತರ ಆತನ ಖಾಸ ಮಗಳಾದ 4 ನೇ ಪ್ರತಿವಾದಿಯ ಹೆಸರಿನಲ್ಲಿ ವಾರಸಾ ಆಯಿತು ಎಂದರೆ ಸುಳ್ಳು. ದಿಃ 30.08.1973 ರಂದು ಅದರಂತೆ ಮಸೂತಿ ಗ್ರಾಮದ ಡ ನಂ.2142 ಮಂಜೂರಾಯಿತು ಎಂದರೆ ಸುಳ್ಳು. ದಿಃ 13.05.1984 ರಂದು ಬಿಬಿಸಾ ಮರಣ ಹೊಂದಿದ ನಂತರ ಅವಳ ಮರಣ ನಂತರ ಆತನ ಮಗನಾದ ಫಕೀರಸಾಬ ಹೆಸರಿಗೆ ಸದರಿ ಆಸ್ತಿ ವಾರಸಾ ಆಯಿತು ಎಂದರೆ ಸುಳ್ಳು. ಆ ಪ್ರಕಾರ ಮಸೂತಿ ಗ್ರಾಮದ ಡ ನಂ.3203 ಮಂಜೂರಾಯಿತು ಎಂದರೆ ಸಾಕ್ಷಿಯು ವಜಾ ಆಗಿದೆ ಎನ್ನುತ್ತಾರೆ. ಮುಂದೆ ಪ್ರತಿವಾದಿ 1, 2 ಹಾಗೂ ಅವರ ತಂದೆಯವರು ಮಸಾೂತಿ ಗ್ರಾಮದ ಸರ್ವೆ ನಂ.293 ನ್ನು ದಿಃ 24.06.1985 ರಂದು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು. ವಾಟ್ನಿ ಪ್ರಕಾರ ಮಸೂತಿ ಗ್ರಾಮದ ಡ ನಂ.3338 ಮಂಜೂರಾಯಿತು ಎಂದರೆ ಸರಿಯಲ್ಲ. ಈ ರೀತಿಯಾಗಿ ಡ ಮಂಜೂರಾದ ನಂತರ ಸರ್ವೆ ನಂ.293/2 ರಲ್ಲಿ 27 ಎಕರೆ 4 ಗುಂಟೆ ಜಮೀನು ಪ್ರತಿವಾದಿ 1, 2 ಹೆಸರಿನಲ್ಲಿ ದಾಖಲಾದವು ಎಂದರೆ ಸುಳ್ಳು. ಸರ್ವೆ ನಂ.293/1 ರಲ್ಲಿ 4 ಎಕರೆ ಜಮೀನು ಪ್ರತಿವಾದಿ 1, 2 ರ ತಂದೆಯಾದ ಫಕೀರಸಾಬನ ಹೆಸರಿನಲ್ಲಿ ದಾಖಲಾಯಿತು ಎಂದರೆ ಸುಳ್ಳು. ಪ್ರತಿವಾದಿ 1 ರಿಂದ 4 ರವರು ತಮ್ಮ ಅಜ್ಜ, ತದನಂತರದಲ್ಲಿ ತಮ್ಮ ತಂದೆ ಕಾಲದಿಂದಲು ತಾವೆ ಸಾಗುವಳಿ ಮಾಡುತ್ತ ಬಂದರು ಎಂದರೆ ಸುಳ್ಳು. ನವಾಜಬೇಗ ಹಾಗೂ ಮಿರ್ಜಾ ಬೇಗ ರವರ ಜಮೀನುಗಳು ಬೇರೆ ಬೇರೆ ಇದ್ದು ಅವುಗಳನ್ನು ಅವರ ಅವರೆ ಪ್ರತ್ಯೇಕವಾಗಿ ಸಾಗುವಳಿ ಮಾಡುತಿತದ್ದರು ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಸಂಪೂರ್ಣವಾಗಿ ನಾವೆ ಮಾಡುತ್ತಿದ್ದೇವು ಎಂದು ಸ್ವತಃ ನುಡಿಯುತ್ತಾರೆ. ಮೃತ್ಯು ಪತ್ರದ ಪ್ರಕಾರ ಯಾಸೀನಖಾನ ನಿಗೆ ಹಳೆಯ ಸರ್ವೆ ನಂ. 1 ರಿಂದ 9 ಬಂದಿದ್ದವು. ಸದರಿ ಸರ್ವೆ ನಂಬರುಗಳು 172, 173, 174, 176, 175, 177, 178, 187 ಇದ್ದವು. ಈ ರೀತಿ ಹೇಳಿದ ಸರ್ವೆ ನಂಬರ ಪ್ರಕಾರವೆ ಮೃತ್ಯು ಪತ್ರ ಆಗಿದೆ ಅದೇ ರೀತಿಯಾಗಿ ವರದಿ ಸಹ ಆಗಿದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಯಾಸೀನಖಾನ ರವರು ಮೃತ್ಯು ಪತ್ರದ ಪ್ರಕಾರ ನನಗೆ ಹೊಸ ಸರ್ವೆ ನಂ.292, 296, 298, 774 ಜಮೀನುಗಳ ಬಗ್ಗೆ ಬರೆದುಕೊಟ್ಟಿರುತ್ತಾರೆ. ಈಗ ನಾನು ಓದಿ ನೋಡಿದ ನಿಪಿ-73 ರ ಪ್ರಕಾರ ನನಗೆ ಹಳೆಯ ಸರ್ವೆ ನಂ.176, 177, 178, 674, ಜಮೀನುಗಳ ಬಗ್ಗೆ ಬರೆದು ಕೊಟ್ಟಿರುತ್ತಾರೆ. ಸದರಿ ಮೃತ್ಯು ಪತ್ರ ನಿಪಿ-73 ರ ಪ್ರಕಾರ ಹಳೆ ಸರ್ವೆ ನಂ.175, 188, 298 ಮೂರು ಜಮೀನುಗಳ ಬಗ್ಗೆ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಅವುಗಳ ಬಗ್ಗೆ ಯಾವುದೆ ಗುರುತು ಇಲ್ಲ ಎನ್ನುತ್ತಾರೆ. ಈ ಮೂರು ಸರ್ವೆ ನಂಬರಗಳನ್ನು ಹೊರತು ಪಡಿಸಿ ಬೇರೆ ಜಮೀನುಗಳಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಮೂರು ದಾವೆಗಳು

ಆಗಿದ್ದವು ಎನ್ನುತ್ತಾರೆ. ಎಲ್ಲ 9 ಸರ್ವೆ ನಂಬರುಗಳ ಬಗ್ಗೆ ದಾವೆ ಆಗಿತು. ನಾನು ಹಾಜರಪಡಿಸಿದ ಎಲ್ಲ ದಾಖಲೆಗಳಲ್ಲಿ ಕೆಲವೊಂದಿಷ್ಟು ದಾಖಲೆಗಳನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನಮ್ಮ ಹತ್ತಿರ ಇದ್ದ ದಾಖಲೆಗಳನ್ನು ಹಾಜರಿಸಿದ್ದೇನೆ ಎನ್ನುತ್ತಾರೆ. ಮೃತ್ಯು ಪತ್ರದ ಪ್ರಕಾರ ನನಗೆ ಬಂದಿರುವ ಆಸ್ತಿಗಳು ಬೇರೆ ಇವೆ, ಪ್ರತಿವಾದಿ 1, 2 ರ ಆಸ್ತಿಗಳು ಬೇರೆ ಇವೆ ಸದರಿ ಆಸ್ತಿಗಳಿಗೆ ನನಗೇನು ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1, 2 ರ ಸರ್ವೆ ನಂ.293 ನ್ನು ಎನಟಿಪಿಸಿ ಗಾಗಿ ಸರಕಾರದವರು ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಪರಿಹಾರ ದನವನ್ನು ಮೂಲ ಮಾಲೀಕರಿಗೆ ನೀಡುತ್ತಾರೆಂದರೆ ಸಾಕ್ಷಿಯು ಅದರ ಬಗ್ಗೆ ಲೋಕಾಯುಕ್ತರಿಗೆ ದೂರನ್ನು ಕಳಿಸಿರುತ್ತೇನೆ ಎನ್ನುತ್ತಾರೆ. ಲೋಕಾಯುಕ್ತರಿಗೆ ದೂರನ್ನು ನೀಡಿದ್ದರೆ ಎಲ್ಲರಿಗೆ ನೋಟಿಸು ಬರುತ್ತದೆ ಎಂರೆ ಸಾಕ್ಷಿಯು ದೂರವಾಣಿ ಮುಖಾಂತರ ಹೇಳಿದ್ದಾರೆ ಎನ್ನುತ್ತಾರೆ. ಲೋಕಾಯುಕ್ತರಿಗೆ ದೂರು ನೀಡಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರ ಮಾಡಿದ್ದೇನೆ. ಸಿವಿಲ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದೆ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿಯು ಸಹ ಚಾಲ್ತಿಯಲ್ಲಿದೆ, ಸಿವಿಲ ನ್ಯಾಯಾಲಯದಲಿಯೇ ಪರಿಹಾರ ಪಡೆದುಕೊಳ್ಳಿ ಎಂದು ಲೋಕಾಯುಕ್ತರು ಆದೇಶ ಮಾಡಿರುತ್ತಾರೆ. ಈ ನ್ಯಾಯಾಲಯದಲ್ಕಿ ದಾವೆಯನ್ನು 2014 ರಲ್ಲಿ ಸಲ್ಲಿಸಿರುತ್ತೇನೆ. ದಾವೆ ಸಲ್ಲಿಸಿದ ದಿನಾಂಕ ಹೇಳಲಾಗುವುದಿಲ್ಲ. ಪ್ರತಿವಾದಿಯರು 1, 2 ದಿಃ 21.11.2012 ರಂದು ಪರಿಹಾರ ದನವನ್ನು ಪಡೆದುಕೂಂಡಿದ್ದಾರೆಂದರೆ ಸಾಕ್ಷಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಡಬ್ಲೂಪಿ ಚಾಲ್ತಿಯಲ್ಲಿತ್ತು ಎನ್ನುತ್ತಾರೆ. ವಿಜಾಪೂರದಲ್ಲಿ ಸಲ್ಲಿಸಿದ ರಿವಿಜನ 9/2012 ವಜಾ ಆದ ನಂತರ ಪರಿಹಾರ ದನ ಪಡೆದಿದ್ದಾರೆಂದರೆ ಸಾಕ್ಷಿಯು ಸದರಿ ಪ್ರಕರಣ ವಜಾ ಆಗಿಲ್ಲ ಸಿವಿಲ ನ್ಯಾಯಾಲಯಕ್ಕೆ ಹೋಗಲು ಹೇಳಿರುತ್ತಾರೆ ಎನ್ನುತ್ತಾರೆ. ಪ್ರತಿವಾದಿ 1 ರಿಂದ 4 ರಿಗೆ ತೊಂದರೆ ಕೊಡಲು ಎಂದು ಖೊಟ್ಟಿ ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1, 2 ರ ಜಮೀನಿಗು ನನಗು ಯಾವುದೆ ರೀತಿಯಾದ ಸಂಬಂದ ಇಲ್ಲ ಎಂದರೆ ಸರಿಯಲ್ಲ. 1922 ರಿಂದಲೆ ಸದರಿ ಆಸ್ತಿಯನ್ನು ಪ್ರತಿವಾದಿ 1, 2 ರ ಅಜ್ಜ ತದನಂತರದಲ್ಲಿ ಅವರ ತಂದೆ, ತದನಂತರದಲ್ಲಿ ಪ್ರತಿವಾದಿ 1, 2 ರವರೆ ಸಾಗುವಳಿ ಮಾಡುತ್ತ ಬಂದಿರುತ್ತಾರೆ ಎಂದರೆ ಸಾಕ್ಷಿಯು ಡ ರದ್ದು ಆಗಿತ್ತು ಎನ್ನುತ್ತಾರೆ. ಅಲ್ಲಿಂದ ವಾರಸಾ ಪರವಾಗಿ ಆದ ಎಲ್ಲ ಡ ಗಳು ರದ್ದಾಗಿವೆ ಏನ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವು ನಮ್ಮ ಪರವಾಗಿ ಆಗಿವೆ ಎನ್ನುತ್ತಾರೆ. ಎಷ್ಟು ಡ ಗಳು ರದ್ದಾಗಿವೆ ಎನ್ನುವ ಬಗ್ಗೆ ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರತಿವಾದಿ 1, 2 ರಿಗೆ ಭೂ ಪರಿಹಾರ ದನ ಬಂದು ಅವರು ನನಗಿಂತ ಜಾಸ್ತಿ ಶ್ರೀಮಂತರು ಆಗುತ್ತಾರೆ ಎಂದು ಅವರ

ಮೇಲೆ ಖೊಟ್ಟಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1, 2 ರಿಗೆ ಉದ್ದೇಶಪೂರಕವಾಗಿ ತೊಂದರೆ ಕೊಡಲಿ ಎಂದು ಖೊಟ್ಟಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನಿಜ ದಾವೆ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಸಾಕ್ಷಿ ಪ್ರಮಾಣಪತ್ರದ ಎಲ್ಲ ಸಂಗತಿಗಳುಸುಳ್ಳು ಇವೆ ಎಂದರೆ ಸಾಕ್ಷಿಯು ನಿಜ ಇದೆ ಎನ್ನುತ್ತಾರೆ. ನಾನು ಹಾಜರ ಮಾಡಿದ ಎಲ್ಲ ದಾಖಲೆಗಳು ಖೊಟ್ಟಿಯಾಗಿವೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸರ್ವೆ ನಂಬರುಗಳಲ್ಲಿ ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಬರೆದಿರುವ ಎಲ್ಲ ಸಂಗತಿಗಳು ಸುಳ್ಳು ಇವೆ ಎಂದರೆ ಸಾಕ್ಷಿಯು ನಿಜವಿದೆ ಎನ್ನುತ್ತಾರೆ.

**ಪಾಟಿ ಸವಾಲು 3 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಎನ್ ಎಸ್ ವಕೀಲರಿಂದ**

ಈ ದಾವೆಯನ್ನು ಬರೆಯಲು ನಾನೆ ಮಾಹಿತಿಯನ್ನು ನೀಡಿದೆನು. ಈ ದಾವೆಯಲ್ಲಿ ಹುಸೇನಬಿ ಗಂ.ರಾಜೇಸಾಬ ಮುಲ್ಲಾ ರವರು ಮಾಡಿ ಕೊಟ್ಟಿರುವ ಮೃತ್ಯು ಪತ್ರವನ್ನು ಹಾಜರ ಮಾಡಿದ್ದೇನೆ. ಸದರಿ ಮೃತ್ಯು ಪತ್ರವನ್ನು ಓದಿ ನೋಡಿದ್ದೇನೆ. ಸದರಿ ಮೃತ್ಯು ಪತ್ರದಲ್ಲಿ ಹಳೆಯ ಸರ್ವೆ ನಂ.172, 173, 174 ಹಾಗೂ 176 ರ ಬಗ್ಗೆ ಬರೆದಿರುವುದಿಲ್ಲ. ಸದರಿ ಮೃತ್ಯು ಪತ್ರದಲ್ಲಿ ಸರ್ವೆ ನಂ.178, 188, 175, 187 ರ ಬಗ್ಗೆ ಮಾತ್ರ ಬರೆದಿದ್ದಾರೆ. ದಿಃ 17.10.1940 ರಲ್ಲಿ ಯಾಸೀನಖಾನ ಹಾಜಿಮುದ್ದೀನ ಇವರ ಹೆಸರಿನಲ್ಲಿ –------------------------- ಆಗಿದೆ ಅದರ ಪೂರ್ವದಲ್ಲಿಯು ಸಹ ಒಂದು ಆಗಿತ್ತು ಎಂದು ಸಾಕ್ಷಿಯು ಸ್ವತಃ ನುಡಿಯುತ್ತಾರೆ. ಈಗ ನನಗೆ ಓದಿ ಹೇಳಿದ ನಿಪಿ-2 ರ ಪ್ರಕಾರ ನನಗೆ ಓದಿ ಹೇಳಿದ ಪ್ರಕಾರ ಸರ್ವೆ ನಂ.175, 178, 177, 188 ನ್ನು ಕೂಡಿಸಿದ್ದಾರೆಂದರೆ ಸಾಕ್ಷಿಯು ಕೂಡಿಸಿಲ್ಲ ಎನ್ನುತ್ತಾರೆ. ಈಗ ನನಗೆ ಓದಿ ಹೇಳಿದ ನಾನು ಓದಿ ನೋಡಿದ ನಿಪಿ-4 ಹಕ್ಕು ಬದಲಾವಣೆ ವಹಿಯ ಪ್ರಕಾರ ವಾದ ಪತ್ರದ ಕ್ರ ಸಂಖ್ಯೆ 4 ರಿಂದ 8 ರಲ್ಲಿರುವ ಆಸ್ತಿಗಳ ಬಗ್ಗೆ ಮಾತ್ರ ಮೃತ್ಯು ಪತ್ರ ಆಗಿದೆ ಎಂದರೆ ಸರಿ. ಈಗ ನನಗೆ ಓದಿ ಹೇಳಿದ ನಿಪಿ-6 ಡ ನಂ.1477 ರ ಪ್ರಕಾರ 1958 ರಲ್ಲಿ ಯಾಸೀನಖಾನ ನಂತರ ಅಬ್ದುಲ ಅಜೀಮುದ್ದೀನ ಮೈನುದ್ದೀನ ಖಾಜಿ ಇವರ ಹೆಸರಿಗೆ ಮೃತ್ಯು ಪತ್ರದ ಪ್ರಕಾರ ವಾದಪತ್ರದ ಕ್ರಮ ಸಂಖ್ಯೆ 4 ರಿಂದ 8 ರ ಆಸ್ತಿಗಳು ದಾಖಲಾದವು ಎಂದರೆ ಸರಿ. ನಾನು ಹಾಜರ ಮಾಡಿದ ನಿಪಿ-18 ರ ಪ್ರಕಾರ ಡ ನಂ.215 ರ ಪ್ರಕಾರ ದಿಃ 15.01.1930 ರಂದು ವಾದಪತ್ರದ ಕ್ರಮ ಸಂಖ್ಯೆ 1 ರಿಂದ 4 ರಲ್ಲಿ ಕಾಣಿಸಿರುವ ದಾವಾಸ್ತಿಗಳು ಮಿರ್ಜಾ ಬೇಗ ಲಾಡಬೇಗ ಮುಲ್ಲಾ

ಇತನು ಮರಣ ಹೊಂದಿದ ನಂತರ ಆತನ ಮಗನ ಹೆಸರಿನಲ್ಲಿ ದಾಖಲಾದವು ಎಂದರೆ ಸಾಕ್ಷಿಯು ಅದು ರದ್ದಾಗಿದೆ ಎನ್ನುತ್ತಾರೆ. ಯಾವ ದಿನ ಅರ್ಜಿ ಕೊಟ್ಟಿದ್ದರೊ ಅದೇ ದಿನ ಸದರಿ ಡ ರದ್ದು ಆಗಿದೆ ಎಂದು ನುಡಿಯುತ್ತಾರೆ. ಸದರಿ ಡ ರದ್ದಾದ ಬಗ್ಗೆ ಅದೇ ನಿಪಿ-18 ರಲ್ಲಿ ಇದೇ ಎಂದು ನುಡಿಯುತ್ತಾರೆ. ಈ ಡ ನಂಬರ ರದ್ದಾಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರ ಮಾಡಿದ ದಾಖಲೆಗಳಲ್ಲಿ ರದ್ದಾದ ಬಗ್ಗೆ ಯಾವುದೆ ದಾಖಲೆ ಇಲ್ಲ ಎಂದರೆ ಸಾಕ್ಷಿಯು ಅದು ದಾಖಲೆಯ ರಿಮಾರ್ಕ್ಸ ಕಾಲಂನಲ್ಲಿ ಇದೆ ಎಂದು ನುಡಿಯುತ್ತಾರೆ. ಆರಟಿಎಸ ನಂ. 1/1977-78 ನ್ನು ನಾನೆ ದಾಖಲಿಸಿದ್ದೇನು. ಅದು 1981 ರಲ್ಲಿ ವಜಾ ಆಯಿತು ಎಂದರೆ ಸಾಕ್ಷಿಯು ನನ್ನ ಪರವಾಗಿ ಆಗಿದೆ ಎಂದು ನುಡಿಯುತ್ತಾರೆ. ನಾನೆ ಅದರ ಮೇಲೆ ಆರಿಟಿಎಸ ಅಪೀಲನ್ನು 37/1981 ನ್ನು ಉಪವಿಭಾಗಧಿಕಾರಿಯವರ ಮುಂದೆ ಸಲ್ಲಿಸಿರುತ್ತೇನೆ. ದಿಃ 12.11.1982 ರಲ್ಲಿ ಸದರಿ ಪ್ರಕರಣ ನಿಖಾಲಿ ಆಯಿತು ಎಂದರೆ ಸಾಕ್ಷಿಯು ಅವರು ಕೊಡುತ್ತೇನೆಂದು ಹೇಳಿದ್ದರಿಂದ ಪ್ರಕರಣ ವಜಾ ಆಯಿತು ಎನ್ನುತ್ತಾರೆ. 2011-12 ನೇ ಸಾಲಿನಲ್ಲಿ ನಾನು ಇದೇ ಆದೇಶದ ಮೇಲೆ ಡಿಸಿ ರವರ ಮುಂದೆ ರಿವಿಜನನ್ನು ಸಲ್ಲಿಸಿರುತ್ತೇನೆ. ಡಿಸಿ ರವರ ಮುಂದೆ ಆದೇಶ ನನ್ನ ವಿರುದ್ಧ ಆಗಿಲ್ಲ ನನ್ನ ಪರವಾಗಿ ಆಗಿದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ ಅರ್ಜಿ 87070/2012 ನ್ನು ನಾನೆ ಸಲ್ಲಿಸಿರುತ್ತೇನೆ. ಡಿಸಿ ರವರ ಆದೇಶವನ್ನು ಪ್ರಶ್ನಿಸಿ ಈ ರಿಟ್ ಅರ್ಜಿ ಸಲ್ಲಿಸಿದ್ದೇನು. ನನ್ನ ವಕೀಲರ ಅಭಿಪ್ರಾಯದಂತೆ ಬಾಗೇವಾಡಿಯ ಸಿವಿಲ್ ನ್ಯಾಯಾಲಯದಲ್ಲಿ ಬಗೆ ಹರಿಸಿಕೊಳ್ಳಲು ಹೇಳಿದ್ದರಿಂದ ನಾನೆ ರಿಟ್ ಅರ್ಜಿಯನ್ನು ಹಿಂಪಡೆದಿರುತ್ತೇನೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನನಗೆ ಸಿವಿಲ ನ್ಯಾಯಾಲಯದಲ್ಲಿ ನಮ್ಮ ಹಕ್ಕನ್ನು ಇತ್ಯರ್ಥ ಪಡಿಸಿಕೊಳ್ಳಲು ಯಾವುದೆ ಆದೇಶ ಮಾಡಿರುವುದಿಲ್ಲ. ವಾದಪತ್ರದಲ್ಲಿ ಈ ರೀತಿಯಾಗಿ ವಕೀಲರ ಅಭಿಪ್ರಾಯದಂತೆ ಸಿವಿಲ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಬೇಕೆನ್ನುವ ಕಾರಣವನ್ನು ತೋರಿಸಿಲ್ಲ ಸಾಕ್ಷಿಯು ಪುನಃ ಮುಂದುವಲರೆದು ಸಿವಿಲ ಪ್ರಕರಣ ಬೇರೆ ರಿಟ್ ಅರ್ಜಿ ಬೇರೆ ಎಂದು ನುಡಿಯುತ್ತಾರೆ. ದಾವೆಗೆ ವ್ಯಾಜ್ಯ ಕಾರಣ ಏನು ಯಾವಾಗ ಉಂಟಾಗಿದೆ ಎಂದರೆ ಸಂಪೂರ್ಣ ಜಮೀನು ನಮ್ಮದು, ಮೊದಲು ನಮ್ಮ ದೊಡ್ಡಪ್ಪನಿಗೆ ಸೇರಿತ್ತು ನಂತರ ನನಗೆ ಬಂತು, ಆರಟಿಎಸ ಪ್ರಕರಣಗಳು ಆಗಿದ್ದವು, ಫಕೀರಪ್ಪ ತೀರಿಕೊಂಡ ನಂತರ ನಾನೆ ಈ ದಾವೆಯನ್ನು ಸಲ್ಲಿಸಿದ್ದೇನೆ ಎನ್ನುತ್ತಾರೆ. ವಾದಪತ್ರದಲ್ಲಿ ಕಾಣಿಸಿರುವ ಕ್ರಮ ಸಂಖ್ಯ 1 ರಿಂದ 4 ರಲ್ಲಿರುವ ಆಸ್ತಿಗಳನ್ನು ನೋಡಿದ್ದೇನೆ ನಾನೆ ಮಾಡುತ್ತೇನೆಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸರ್ವೆ ನಂ.172 ರಿಂದ 174, 176 ಕ್ಕೆ

ಕಂದಾಯ ಎಷ್ಟು ಇದೆ ಎಂದು ನನಗೆ ಈಗ ನೆನಪಿಲ್ಲ. ಮಣ್ಣಿನ ಜಮೀನು ಏನಿದೆ ಎಂದು ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪ ಇದ್ದ ಕಾಲದಲ್ಲಿ ಮಾಡಿಸುತ್ತಿದ್ದರು ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಕ್ರಮ ಸಂಖ್ಯೆ 1 ರಿಂದ 4 ರಲ್ಲಿ ಕಾಣಿಸಿರುವ ಆಸ್ತಿಗಳ ಚಕಬಂದಿಯನ್ನು ವಾದಪತ್ರದಲ್ಲಿ ಬರೆಸಿಲ್ಲ. ಚೆಕ ಬಂದಿ ನನಗೆ ನೆನಪಿರಲಿಲ್ಲ ಹಾಗಾಗಿ ಬರೆಸಿಲ್ಲ. ಈಗಲು ಸಹ ನನಗೆ ಸದರಿ ಚಕಬಂದಿ ನೆನಪಿಲ್ಲ. ಯಾರು ಜಮೀನನ್ನು ಮಾಡುತ್ತಾರೊ ಅವರಿಗೆ ಚಕಬಂದಿಯ ಬಗ್ಗೆ ಮಾಹಿತಿ ಇರುತ್ತದೆ. ಸಾಕ್ಷಿ ಪುನಃ ಮುಂದುವರೆದು ನನಗು ಮಾಹಿತಿ ಇದೆ ಆದರೆ ಈಗ ನೆನಪಿಲ್ಲ ಎನ್ನುತ್ತಾರೆ. ಸದರಿ ನಾಲ್ಕು ಜಮೀನಿನಲ್ಲಿ ವಾರ್ಷಿಕ ಯಾವ ಬೆಳೆಯನ್ನು ಬೆಳೆಯುತ್ತಿದ್ದವು ಎಷ್ಟು ಖರ್ಚು ಮಾಡಿದೆವು ಎಷ್ಟು ಆದಾಯ ಬಂದಿತು ಎಂದು ಎಲ್ಲಿಯು ಲೇಖಿ ಬರೆದಿಲ್ಲ. ಈ ಜಮೀನುಗಳಿಂದ ಬಂದ ಬೆಳೆಯನ್ನು ಎಪಿಎಮಸಿ ಯಲ್ಲಿ ಮಾರಾಟ ಮಾಡಿದ ಪಟ್ಟಿಯನ್ನು ಪಡೆದಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಮನೆಗಾಗಿ ಬಳಸುತ್ತಿದ್ದೇವು ಎನ್ನುತ್ತಾರೆ. ವಾದಪತ್ರದಲ್ಲಿ ಕಾಣಿಸಿರುವ ಕ್ರಮ ಸಂಖ್ಯೆ 1 ರಿಂದ 4 ರಲ್ಲಿರುವ ಜಮೀನುಗಳನ್ನು ನಾನು ಎಂದಿಗು ಸಾಗು ಮಾಡಿಲ್ಲ ನನಗೆ ಏನು ಸಂಬಂದ ಇಲ್ಲ ಎಂದರೆ ಸರಿಯಲ್ಲ. ಈ ದಾವಾ ಜಮೀನುಗಳಿಗು ನನಗು ಏನು ಸಂಬಂದ ಇರದಿದ್ದರು ಸಹ ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ಆಸ್ತಿಗಳನ್ನು ಸಮ್ಮನೆ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವಾ ಜಮೀನುಗಳೆಲ್ಲ ಎನಟಿಪಿಸಿ ಗೆ ಭೂ ಸ್ವಾಧೀನವಾಗಿವೆ. ಭೂ ಸ್ವಾಧೀನ ಆದ ಬಗ್ಗೆ ಐತೀರ್ಪು ಆಗಿದೆ. ಸದರಿ ಐತೀರ್ಪನಲ್ಲಿ ಈ ಎಲ್ಲ ಜಮೀನುಗಳು ನನಗೆ ಸೇರಿದೆ ಎಂದು ಬರೆದಿರುತ್ತಾರೆ. ಸದರಿ ಐತೀರ್ಪಿನಲ್ಲಿ ಸದರಿ ನಾಲ್ಕು ಜಮೀನುಗಳಿಗೆ ನನ್ನ ಮಾಲೀಕತ್ವನ್ನು ರುಜುವಾತು ಪಡಿಸಲು ವಿಫಲನಾಗಿದ್ದೇನೆಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ಐತೀರ್ಪಿನಲ್ಲಿ ಈ ರೀತಿಯಾಗಿ ಎನಟಪಿಸಿ ಗೆ ನಾನು ತೊಂದರೆ ಮಾಡಲು ಎಂದು ನಾನು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೇನೆ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿದಾರ ಬರೆದಿರಬಹುದು ಎಂದು ನುಡಿಯುತ್ತಾರೆ. ಈ ಜಮೀನುಗಳಿಗು ನನಗು ಏನು ಸಂಬಂದ ಇರದಿದ್ದರು ಸಹ ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ನಾಲ್ಕು ಜಮೀನುಗಳನ್ನು ಈ ದಾವೆಯಲ್ಲಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಪ್ರತಿವಾದಿ 4 ರಿಂದ 6 ರ ಪರವಾಗಿ ಹಾಗೂ ಉಳಿದ ಪ್ರತಿವಾದಿ ಪರ ವಕೀಲರು ಸಹ ಸಮಯ ಕೋರಿದ್ದರಿಂದ ಮುಂದುವರೆದ ಪಾಟಿ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

(ಶ್ರೀಮತಿ ಎಸ್.ಎಲ್.ಲಾಡಖಾನ್)
ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ